ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

**ಸಿ.ಸಿ. ನಂ. 268/2024 ಸಿ. ಡಬ್ಲ್ಯೂ: 1 ಪಿ ಡಬ್ಲ್ಯೂ ಃ 1**

ಸಾಕ್ಷಿಯ ಹೆಸರು ಃ ಮಲ್ಲಿಕಾರ್ಜುನ ಮೇಟಿ

ತಂದೆಯ ಹೆಸರು ಃ ಶಂಕ್ರಪ್ಪ

ವಯಸ್ಸು ಃ 65 ವರ್ಷ

ಉದ್ಯೋಗ ಃ ನಿವೃತ್ತ ಇ ಓ, ಕಾರ್ಯನಿರ್ವಾಹಕ ಅಧಿಕಾರಿಗಳು.

ವಾಸಸ್ಥಳ ಃ ಸುಣಗ್, ತಾಲೂಕಃ ಬೀಳಗಿ, ಜಿಲ್ಲಾ ಃ ಬಾಗಲಕೋಟೆ.

ದಿನಾಂಕಃ 18/06/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ನಾನು ದಿಃ 31-12-2015 ರಿಂದ 23-01-2020 ರ ವರೆಗೆ ಕುಂದಗೋಳದಲ್ಲಿ ತಾಲೂಕ ಪಂಚಾಯತಿ ಕಚೇರಿಯಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕೆಲಸ ಮಾಡಿದ್ದೇನೆ. ದಿಃ 08-12-2017 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಧಾರವಾಡ ಇವರು 1 ರಿಂದ 3 ನೇ ಮತ್ತು ಉಳಿದ ಐದು ಜನ ಆರೋಪಿತರ ವಿರುದ್ಧ ದೂರು ಕೊಡುವಂತೆ ತಿಳಿಸಿರುತ್ತಾರೆ. ಉಪ ಲೋಕಾಯುಕ್ತರಿಗೆ ಶೇಖಪ್ಪ ತಂದೆ ರಾಮಪ್ಪ ಮರೆಕ್ಕನ್ನವರ ದೂರು ನೀಡಿದ್ದು, ಸದರಿ ದೂರಿನಲ್ಲಿ 2012-13 ಮತ್ತು 2013-14 ನೇ ಸಾಲಿನಲ್ಲಿ ಕಮಡೊಳ್ಳಿ ಗ್ರಾಮ ಪಂಚಾಯತಿಯ ಸರಕಾರದಿಂದ ಬಂದ ಅನುದಾನದ ಹಣವನ್ನು ದುರುಪಯೋಗ ಪಡಿಸಿದ್ದಾರೆ ಎಂದು ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತಾರೆ. ಸದರಿ ಹಣ ಶೌಚಾಲಯ ಹಾಗೂ ಎಸ್ ಡಿ ಎಸ್ ಮತ್ತು ರಸ್ತೆ ಕಾಮಗಾರಿಗೆ ಸಂಬಂಧಿಸಿದ್ದಾಗಿತ್ತು. ಎಸ್ ಶ್ರೀಕಾಂತ ಮತ್ತು ನಾರಾಯಣರಾವ್ ಉಪ ಲೋಕಾಯುಕ್ತ ಕಚೇರಿಯಿಂದ ತನಿಖೆಗೆ ಕಮಡೊಳ್ಳಿ ಗ್ರಾಮ ಪಂಚಾಯತಿಗೆ ದಿಃ 25-06-2015 ಮತ್ತು 26-06-2015 ರಂದು ಬಂದು, ಸ್ಥಳ ಪರೀಶೀಲನೆ ಮಾಡಿ, 14 ಶೌಚಾಲಯಗಳನ್ನು ಪರೀಶೀಲಿಸಿದ್ದು ಅವುಗಳ ಕಾಮಗಾರಿ ಆಗಿರಲಿಲ್ಲ. ಮಣ್ಣಿನ ಕೊರೆತ ತಡೆಗೋಡೆ ಸ್ಥಳವನ್ನು ಪರೀಶೀಲಿಸಿದಾಗ ಸದರಿ ಕಾಮಗಾರಿ ಚೆನ್ನಾಗಿ ಆಗಿರಲಿಲ್ಲ.ರಸ್ತೆಗೆ ರೂ. 80,000/- ಖರ್ಚು ಹಾಕಿದ್ದು, ಯಾವುದೇ ರಸ್ತೆ ಆಗಿರಲಿಲ್ಲ. ಅವರಿಬ್ಬರೂ ಪ್ರತ್ಯೇಕವಾದ ವರದಿ ನೀಡಿರುತ್ತಾರೆ. ಶ್ರೀಕಾಂತ ಅವರು 14 ಶೌಚಾಲಯಗಳ ಫಲಾನುಭವಿಗಳ ಪಟ್ಟಿ ನೀಡಿದ್ದು, ಅವರೆಂದರೆ ಚಾಸಾ 8 ರಿಂದ 21 ತಲಾ ರೂ. 4,495/- ಹಣ ಖರ್ಚು ಹಾಕಿ 14

ಶೌಚಾಲಯಗಳಿಂದ ಒಟ್ಟು ರೂ. 62,930/- ದುರುಪಯೋಗ ಆಗಿರುವುದು ಕಂಡು ಬಂತು. ಎಸ್ ಡಿ ಎಸ್ ಕಾಮಗಾರಿ ಆಗಿಲ್ಲ ಎಂದು ವರದಿ ನೀಡಿದ್ದು, ಸದರಿ ಎಸ್ ಡಿ ಎಸ್ ಕಾಮಗಾರಿಗೆ 1 ರಿಂದ 3 ನೇ ಆರೋಪಿತರು ರೂ. 2,40,436/- ಖರ್ಚು ಹಾಕಿ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಎಚ್ ಆರ್ ನಾರಾಯಣರಾವ್ ಅವರು ರೂ. 80,000/- ರಸ್ತೆ ಕಾಮಗಾರಿಗೆ ಖರ್ಚು ಹಾಕಿದ್ದು, ಆದರೆ ಯಾವುದೇ ರಸ್ತೆ ಆಗಿಲ್ಲ ಎಂದು ಆರೋಪಿತರು ಸದರಿ ಹಣ ದುರುಪಯೋಗ ಪಡಿಸಿಕೊಂಡಿರುವುದಾಗಿ ವರದಿ ನೀಡಿರುತ್ತಾರೆ. ಸದರಿ ರೂ. 80,000/- ಹಣ 4 ಗ್ರಾಮ ಪಂಚಾಯತಿ ಅಧಿಕಾರಿಗಳದ ಸಂಬಂಧಿಕರಾದ ಇಸ್ಮಾಯಿಲ್ ಅಲಿಖಾನ್ ದಿಃ 02-1-2014 ರಂದು ಚಕ್ ನಂಬರ 3780 ರೂ. 20,000/-, ಮಕ್ತುಮಸಾಬ ಬಾಬಜಿ ದಿಃ 02-1-2014 ರಂದು ಚಕ್ ನಂಬರ 3782 ರೂ. 20,000/-, ಶಿವಾನಂದ ಗುಡ್ಡೆಮ್ಮ್ನವರ ದಿಃ 23-1-2014 ರಂದು ಚಕ್ ನಂಬರ 3784 ರೂ. 20,000/- ಮತ್ತು ಹನಮಂತಪ್ಪ ಕಾಯಿಪಲ್ಯೆ ದಿಃ 02-1-2014 ರಂದು ಚಕ್ ನಂಬರ 3783 ರೂ. 20,000/- ರವರ ಹೆಸರಿನಲ್ಲಿ ಅವರ ಖಾತೆಗೆ ಹಣ ಹಾಕಿದ್ದಾಗಿ ತೋರಿಸಿ ಸರಕಾರದ ಹಣವನ್ನು 1 ಮತ್ತು 2 ನೇ ಆರೋಪಿತರೊಂದಿಗೆ ಮೀಲಾಪಯೋಗಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಒಟ್ಟು ರೂ. 3,83,366/- ಸರಕಾರದ ಹಣವನ್ನು ಸ್ವಂತಕ್ಕೆ ಬಳಸಿಕೊಂಡು ಸರಕಾರಕ್ಕೆ ಮೋಸ ನಂಬಿಕೆ ದ್ರೋಹ ಮತ್ತು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಸರಕಾರಕ್ಕೆ ನಷ್ಟ ಪಡಿಸಿರುತ್ತಾರೆ. ದೂರನ್ನು ಈಗಾಗಲೇ ಸಿ ಸಿ ನಂಬರ 267/2024 ರಲ್ಲಿ ನಿಪಿ. 1 ಎಂದು ಗುರುತಿಸಲಾಗಿದೆ. ದಿಃ 30-07-2018 ರಂದು ಪೋಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ. 2 ನೇ ಆರೋಪಿ ದಿಃ 16-11-2010 ರಿಂದ 18-06-2016 ರ ವರೆಗೆ ಕಮಡೊಳ್ಳಿ ಗ್ರಾಮ ಪಂಚಾಯತಿ ಪಿ ಡಿ ಓ ಆಗಿ ಕರ್ತವ್ಯ ನಿರ್ವಹಿಸಿದ ಬಗ್ಗೆ ಧೃಡೀಕರಣ ಪತ್ರವನ್ನು ನೀಡಿದ್ದು, ಅದನ್ನು ಈಗಾಗಲೇ ಸಿ ಸಿ ನಂಬರ 267/2024 ರಲ್ಲಿ ನಿಪಿ. 2 ಎಂದು ಗುರುತಿಸಲಾಗಿದೆ. 1 ನೇ ಆರೋಪಿ ಆ ಸಮಯದಲ್ಲಿ ಕಮಡೊಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷನಿದ್ದು, 2 ನೇ ಆರೋಪಿ ಪಿ ಡಿ ಓ ಆಗಿ ಕೆಲಸ ಮಾಡುತ್ತಿದ್ದರು.

(ಮೂಲ ದಾಖಲೆಗಳು ಕಡತದಲ್ಲಿ ಇಲ್ಲದ ಕಾರಣ ಅವುಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಹಾಜರು ಪಡಿಸಿ ನಿಶಾನೆಯಾಗಿ ಗುರುತಿಸಲು ಸಾಕ್ಷಿ ಸಮಯ ಕೋರಿದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.